**ಭಾಷೆಯ ಬಳಸಿ ಬೆಳೆಸಬೇಕು: ಡಾ. ನಾಗತಿಹಳ್ಳಿ ಚಂದ್ರಶೇಖರ್**

ನಗರದ ಸಂತ ಫಿಲೋಮಿನಾ ಪದವಿ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವವನ್ನು ಸೋಮವಾರ (ನಂ. 2) ಆಚರಿಸಲಾಯಿತು.

ಅಂತರ್ಜಾಲದ ಸಹಾಯದಿಂದ ವಿದ್ಯಾರ್ಥಿಗಳು ಹಾಗೂ ವಿವಿಧ ವಿಭಾಗಗಳ ಶಿಕ್ಷಕರು ಕಾರ್ಯಕ್ರಮವನ್ನು ವೀಕ್ಷಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಹೆಸರಾಂತ ಚಲನಚಿತ್ರ ನಿರ್ದೇಶಕ, ಸಾಹಿತಿ ಡಾ. ನಾಗತಿಹಳ್ಳಿ ಚಂದ್ರಶೇಖರ್ ಮಾತನಾಡಿ, “ತಂತ್ರಜ್ಞಾನವನ್ನು ಸ್ವೀಕರಿಸಿ, ಸರಿಯಾಗಿ ಬಳಸಬೇಕು, ಹುಸಿ ನಿರಾಕರಣೆ ಮಾಡಬಾರದು. ಎಲ್ಲವನ್ನೂ ವಶಪಡಿಸಿಕೊಂಡು, ಕನ್ನಡವನ್ನು ಕಟ್ಟುವುದರ ಬಗೆಯನ್ನು ಯೋಚಿಸಬೇಕು. ಹೊರಗಿನವರು ನಮ್ಮ ನಾಡಿಗೆ ಬಂದಾಗ ಕಲಿಯಲೇ ಬೇಕಾದ ಇಕ್ಕಟ್ಟು ಸೃಷ್ಟಿಸಿದರೆ ಅವರೂ ಕನ್ನಡ ಕಲಿಯುತ್ತಾರೆ” ಎಂದರು.

“1956ರಲ್ಲಿ ವಿಶಾಲ ಕರ್ನಾಟಕ ರಚನೆಯಾಯಿತು. ಒಂದು ಭಾಷೆಯ ಜನರು ಒಂದೆಡೆ ಸೇರುವುದು ಬಹಳ ಮುಖ್ಯ. ಭಾಷೆ ಎಂದಿಗೂ ಬಳಸುವುದರಿಂದ ಬೆಳೆಯುತ್ತದೆ. ನಾವು ಕನ್ನಡಿಗರು ಔದಾರ್ಯದ ಹೆಸರಿನಲ್ಲಿ ಕನ್ನಡವನ್ನು ಬಳಸದೇ ಇದ್ದರೆ, ಮುಜುಗರಕ್ಕೆ ಈಡಾದರೆ ಅದರಿಂದ ಕನ್ನಡಕ್ಕೆ ನಷ್ಟ ಆಗಲಿದೆ” ಎಂದರು.

“ಭಾಷೆಗೆ ಸ್ಥಾಯಿ ಗುಣ ಇದೆ. ಎಲ್ಲರನ್ನೂ ಒಗ್ಗೂಡಿಸುವ ಶಕ್ತಿ ಇದೆ. ಅದೊಂದು ಕೇಂದ್ರ ಪ್ರಕ್ರಿಯೆ. ಕಿಟಲ್‌ರ ಶಬ್ದಕೋಶ ಒಂದು ಮಹತ್ವದ ಬೆಳೆ” ಎಂದರು.

“ವರ್ತಮಾನದ ಕನ್ನಡದ ಕುರಿತು ಗಾಬರಿ ಬೇಡ. ಅದು ಕರುಣಾಜನಕ ಸ್ಥಿತಿಯಲ್ಲಿದೆ ಎಂದು ಯೋಚಿಸಬೇಕಿಲ್ಲ. ಎಲ್ಲ ಭಾಷೆಗಳಲ್ಲಿಯೂ ಏರು

ಪೇರು, ಅಡೆತಡೆ, ಹೆಗ್ಗಳಿಕೆ ಇರುತ್ತವೆ. ಕನ್ನಡ ಶಾಲೆಗಳು ಮುಚ್ಚುತ್ತಿರುವ ಕುರಿತು ಆತಂಕ ಇದೆ. ಆದರೆ ಎಲ್ಲ ಕ್ಷೇತ್ರಗಳಲ್ಲಿ ಕನ್ನಡದ ಕೆನೆ ಇದೆ. ಇನ್ಫೋಸಿಸ್ ನಾರಾಯಣ ಮೂರ್ತಿ, ಸುಧಾ ಮೂರ್ತಿ ಕನ್ನಡದವ್ರು" ಎಂದು ತಿಳಿಸಿದರು.

"ಸಾಹಿತ್ಯವನ್ನು ದೃಶ್ಯ ಮಾಧ್ಯಮ ಮಸುಕುಗೊಳಿಸುತ್ತದೆ. ಓದುಗ ಸಾಹಿತ್ಯದಿಂದ ತನ್ನ ಕಲ್ಪನೆಯ ವಿಸ್ತಾರವನ್ನು ಪಡೆಯುತ್ತಾನೆ. ಕನ್ನಡದಲ್ಲಿ ಹಲವು ಸಂಸ್ಕೃತ ಪದಗಳು ಸೇರಿಹೋಗಿವೆ. ಆಂಗ್ಲ ಪದಗಳನ್ನು ಕನ್ನಡೀಕರಿಸಿ, ಸ್ಕೂಲು, ಕಾಲೇಜು ಎಂದು ಬಳಸುವುದರಲ್ಲಿ ತಪ್ಪೇನೂ ಇಲ್ಲ. ಇಂಜಿನಿಯರ್ ಬದಲು ಅಭಿಯಂತರು ಎಂದೆಲ್ಲ ಕ್ಲಿಷ್ಟ ಪದ ಬಳಸಿ, ಕನ್ನಡವನ್ನು ಉಸಿರುಗಟ್ಟಿಸಬಾರದು" ಎಂದು ಕಿವಿ ಮಾತು ಹೇಳಿದರು.

ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೋ. ಸದೆಬೋಸ್ ಅವರು ಕಾರ್ಯಕ್ರಮಕ್ಕೆ ಎಲ್ಲರನ್ನು ಸ್ವಾಗತಿಸಿದರು. ಇತಿಹಾಸ ವಿಭಾಗದ ಮುಖ್ಯಸ್ಥರಾದ ಪ್ರೊ. ಪ್ರಕಾಶ್ ಅರಳಪ್ಪ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ, ಮೇರಿ ನಿವೇದಿತಾ ಕಾರ್ಯಕ್ರಮದ ನಿರೂಪಣೆ ಮಾಡಿದರು. ಪ್ರಾಂಶುಪಾಲರಾದ ಡಾ.ರೂತ್ ಶಾಂತ ಕುಮಾರಿ ಕಾರ್ಯಕ್ರಮದ ಕುರಿತು ಮಾತನಾಡಿದರು ಹಾಗೂ ಸ್ವರಚಿತ ಕವನ ವಾಚಿಸಿದರು. ಕಾಲೇಜಿನ ಮುಖ್ಯಸ್ಥರಾದ ಫಾದರ್ ಬರ್ನಾಡ್ ಪ್ರಕಾಶ್ ಬಾರ್ನಿಸ್ ಅಧ್ಯಕ್ಷೀಯ ನುಡಿಗಳನ್ನು ಆಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ರೆಕ್ಟರ್ ಮ್ಯಾನೇಜರ್‌ರಾದ ಫಾದರ್ ಬರ್ನಾಡ್ ಪ್ರಕಾಶ್ ಬಾರ್ನಿಸ್, ವೈಸ್ ರೆಕ್ಟರ್ ಮರಿಯಾ ಗ್ಸೇವಿಯರ್, ಕ್ಯಾಂಪಸ್ ಆಡಳಿತಾಧಿಕಾರಿ ಫಾದರ್ ಜಾನ್ ಪೌಲ್, ಪರೀಕ್ಷಾ ನಿಯಂತ್ರಣಾಧಿಕಾರಿ, ಪ್ರೊ. ಡಾಮಿನಿಕ್ ಬ್ರಿಟ್ಟೋ ರಾಮನ್, ಶೈಕ್ಷಣಿಕ ಸಂಯೋಜಕರಾದ ಪ್ರೋ.ಆಗ್ನೆಸ್, ಸಂಶೋಧನಾ ಸಂಯೋಜಕರಾದ,

ಪ್ರೊ. ಆಲ್ಫೋನ್ಸ್ ಡಿಸೋಜಾ ಉಪಪ್ರಾಂಶುಪಾಲರಾದ ಪ್ರೊ. ಸಂಜಯ್ ನಾಯರ್ ಉಪಸ್ಥಿತರಿದ್ದರು.